ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷ್ಯ.

ತಾರೀಖು 18ನೆ ಆಗಸ್ಟ್ 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯುತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.			ಮೊತ್ತಗಳು ಹಚ್ಚಿ ಕಡಿಮೆ ಸ್ವಲ್ಪ	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್	ತಾರೀಖು	19	500	
ಡಿಟೋ	ಶ್ರೀರಂಗಪಟ್ಟ	ಡಿಟೋ	ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ	ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಕೀರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಕಂಬ	5 ತಾರೀಖು	1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ	ಡಿಟೋ	5	200	
ಡಿಟೋ ..	ತರೀಕೆರೆ ..	ಡಿಟೋ	ಡಿಟೋ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ	ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಕೀರಿರುತ್ತೆ.
ಡಿಟೋ ..	ಸಾಗರ ..	ಡಿಟೋ	ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ	ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಕೀರಿರುತ್ತೆ.

2. ಪ್ರತಿಬಂದು ಕೋಠಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ್ ಅಕ್ಕೌಂಟಂಟರು ಆಫೀಸರು ವಳಗಾಗಿ ಫಾಯಿಷ್ ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಆ್ಯಂ ಮೈಸೂರು.

ಇಸ್ತಿಹಾರ್‌ನಾಮೆ.

ತಾರೀಖು 22ನೆ ನವಂಬರು 1904.

ಗುರುಪುರ ಫಾರೆಸ್ಟು.

ಸ್ಯ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷ್ಯ 5ನೆ ಸೆಕ್ಷ್ಯ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷ್ಯ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗೌರ್ನಮೆಂಟಿನಿಂದ ವಿವರಿಸಲ್ಪಟ್ಟ ಜಕ್ಕು ಬಂದಿಯುಳ್ಳ ಪ್ರದೇಶವು ಸ್ಟೇಟ್ ಫಾರೆಸ್ಟು ಮಾಡಿರುವದಾಗಿ ನಂಬರು ರೆ. 3471— F. L. 21—03—10 ತಾರೀಖು 27—10—04ನೆ ಗೆಜೆಟ್ಟಿನಲ್ಲಿ ಫಾಯಿ ಮ್ಯಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಜಕ್ಕು ಬಂದಿ.
ಮೈಸೂರು.	ಹುಣಸೂರು ತಾಲ್ಲೂಕು ಹು, ಹೆಗ್ಗಡದೇವನಕೋಟೆ ಹೋಬಳಿ.	೧,೩೩೪ ಎಕರೆ, ೨ ಗುಂಟೆ.	ಗುರುಪುರವನ್ನೆ ಜಂಗಲ್.	ಸ್ಥಳ.—ಹುಣಸೂರು ಟವ್ನಿಗೆ 6 ಮೈಲಿ ದೂರದಲ್ಲಿಪ್ಪೆ ಮತ್ತು ೬–7ನೆ ಮೈಲಿ ಕಲ್ಲುಗಳ ಮಧ್ಯಭಾಗದ ಹುಣಸೂರು–ಹೆಗ್ಗಡದೇವನಕೋಟೆ ಭಾಟೂ ಮಾರ್ಗದ ಎರಡು ಭಾಗದಲ್ಲಿಯೂ ಇರುತ್ತದೆ.

1221

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವಿವರಕ್ಕು ಬಂದಿ.
ಮೈಸೂರು	ಹುಣಸೂರು ತಾಲ್ಲೂಕು, ಹೆಗ್ಗಡದೇವನಕೋಟೆ ಹೋಬಳಿ	5,334 ಎಕರೆ, 3 ಗುಂಟೆ	ಗುರುಪುರ ಪನ್ನಾ ಜಂಗಲಿ	ಉತ್ತರಕ್ಕೆ.—ಪೆಂಜಹಳ್ಳಿ ಕಾವಲ್ 1ನೆ ಸರ್ವೆ ನಂಬರು ನೈರುತ್ಯ ಮೂಲೆಯು ಹನುಮಂತಪುರದ ಕಾಲವೆಯನ್ನು ಸೇರತಕ್ಕ ಸ್ಥಳದಿಂದ, ಹೊರಟು, ಎಲ್ಲೆಯು, ಸದರಿ ಪೆಂಜಹಳ್ಳಿ ಸರ್ವೆ ನಂಬರು 1ರ ದಕ್ಷಿಣ ಪಾರ್ಶ್ವವಾಗಿ ಅದೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಮುರಕಲ್ಲು–ವೀರನ ಕೊಪಹಳ್ಳಿ ರಸ್ತೆಯ ಎಡದ ಪಾರ್ಶ್ವವಾಗಿ ಹನುಮಂತಪುರದ ಕಾಲವೆಯ ಮೇಲ್ಭಾಗದಲ್ಲಿರುವ ಹುಣಸೂರು–ಹೆಗ್ಗಡದೇವನಕೋಟೆ ರಸ್ತೆಯ ಸೇತುವೆ ವರಿಗೂ ಹೋಗುತ್ತದೆ. ನಂತರ ಸದರೀ ಭಾಟಾ ರಸ್ತೆಯ ಎಡಪಾರ್ಶ್ವವಾಗಿ ಆಸ್ಪತ್ರೆ ಕಾವಲ್ 1ನೆ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ನಂತರ ಸದರೀ ನಂಬರಿನ ದಕ್ಷಿಣ ಪಾರ್ಶ್ವವಾಗಿ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. (ಇಲ್ಲಿ ಮಜರೆಕಾಲೇನಹಳ್ಳಿ ಸರ್ವೆ ನಂಬರು 11ರ ನೈರುತ್ಯ ಮೂಲೆಯೂ ತಿಕ್ಕುತ್ತೆ). ಪೂರ್ವಕ್ಕೆ.—ನಂತರ ಹನುಮಂತಪುರದ ಕಾಲಿವೆ ಬಲಭಾಗದ ಧಡವನ್ನನುಸರಿಸಿ, ಹೆಗ್ಗಡದೇವನಕೋಟೆ ತಾಲ್ಲೂಕು ಮುಸಕೆರೆ ಗಡಿಯೂ, ಮತ್ತು ಹುಣಸೂರು ತಾಲ್ಲೂಕು ವರಂಟಿ ಮತ್ತು ಗೊಂಡನಹುಂಡಿ ಗ್ರಾಮಗಳ ಗಡಿಯೂ, ಕೇರತಕ್ಕ ಸ್ಥಳಕ್ಕೆ ಹೋಗುತ್ತದೆ. ನಂತರ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಗಡಿ ಅನುಸರಿಸಿ, ಮುಸಕೆರೆ ಗ್ರಾಮದ 31ನೆ ಸರ್ವೆ ನಂಬರಿನ ಈಶಾನ್ಯಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಸದರೀ ಮುಸಕೆರೆ ಸರ್ವೆ ನಂಬರಿನ ಉತ್ತರ ಪಾರ್ಶ್ವವಾಗಿ ಅದರ ವಾಯವ್ಯ ಮೂಲೆಗೆ ಹೋಗುತ್ತದೆ. ನಂತರ, ಭೀಮನಹಳ್ಳಿ ಗ್ರಾಮದ 25ನೆ ಸರ್ವೆ ನಂಬರಿನ ಉತ್ತರಪಾರ್ಶ್ವವಾಗಿ ವರಂಟೀ ಗ್ರಾಮದ 16ನೆ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ನಂತರ ಸದರೀ ಗ್ರಾಮದ 16, 17 ಮತ್ತು 18ನೆ ಸರ್ವೆ ನಂಬರುಗಳ ಪೂರ್ವ ಪಾರ್ಶ್ವವಾಗಿ ಕೊನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ನಂತರ ಅದೇ ಗ್ರಾಮದ 1 ಮತ್ತು 21ನೆ ನಂಬರುಗಳ ದಕ್ಷಿಣಪಾರ್ಶ್ವವಾಗಿ ಕೊನೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ನಂತರ ಅದೇ ಸರ್ವೆ ನಂಬರಿನ ಪೂರ್ವ ಪಾರ್ಶ್ವವಾಗಿ ಈಶಾನ್ಯ ಮೂಲೆಗೆ ಹೋಗುತ್ತದೆ. ನಂತರ ಅದೇ ಗ್ರಾಮದ 12ನೆ ಸರ್ವೆ ನಂಬರಿನ ಪೂರ್ವಪಾರ್ಶ್ವವಾಗಿ 13ನೆ ನಂಬರು ಕೆರೆಯ ನೈರುತ್ಯ ಮೂಲೆಗೆ ಹೋಗುತ್ತದೆ. ನಂತರ ಭಂಡಿದಾರಿ ಅನುಸರಿಸಿ ಹುಣಸೂರು–ಹೆಗ್ಗಡದೇವನಕೋಟೆ ರಸ್ತೆಯ ಮೇಲಿರುವ ಫರ್ಲಾಂಗು ಕಲ್ಲಿನ ವರಿಗೂ ಹೋಗುತ್ತದೆ. ನಂತರ ಸದರೀ ರಸ್ತೆಯ ಬಲಭಾಗದಲ್ಲಿ, ರಸ್ತೆಯನ್ನನುಸರಿಸಿ ಹುಣಸೂರು–ಹೆಗ್ಗಡದೇವನಕೋಟೆ ತಾಲ್ಲೂಕು ಎಲ್ಲೆಯ ಕಲ್ಲಿನ ವರಿಗೂ, ಹೋಗುತ್ತದೆ. ನಂತರ ಹೆಗ್ಗಡದೇವನ ಕೋಟೆ ತಾಲ್ಲೂಕು ಭೀಮನಹಳ್ಳಿ ಗ್ರಾಮದ ಸರ್ವೆ ನಂಬರು 7 ಮತ್ತು 8, ಮತ್ತು ರಾಜೆಗೌಡನ ಹುಂಡಿ ಗ್ರಾಮದ 10ನೆ ಸರ್ವೆ ನಂಬರುಗಳ ಉತ್ತರ ಪಾರ್ಶ್ವವಾಗಿ ಆಖೈರು ನಂಬರಿನ ವಾಯವ್ಯ ಮೂಲೆಯೂ ತುಪ್ಪದಮಡು ಸರ್ವೆ ನಂಬರು 1ರ ಆಗ್ನೇಯ ಮೂಲೆಯೂ ಕೇರುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ತುಪ್ಪದ ಮಡು ಸರ್ವೆ ನಂಬರು 1ರ ಮತ್ತು ಹರಳಹಳ್ಳಿ ಸರ್ವೆ ನಂಬರು 16ರ ಪೂರ್ವ ಪಾರ್ಶ್ವಗಳನ್ನನುಸರಿಸಿ ಹೊರಟ ಸ್ಥಳಕ್ಕೆ ಹೋಗುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟು ಫಾರೆಸ್ಟು ಮಾಡುವದಕ್ಕೆ ಮುಂಜೆ ಇಸ್ತಿಹಾರ್ನಾಮೆ ಪ್ರಕಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಕಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀ ಹಕ್ಕಿ ನಿಂದಲಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಕಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣಿ ಮಾಡಕೂಡದು. ರೆಗ್ಯೂಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರೀಗೋಸ್ಕರ ಗಿಡಗಳ್ಯಾವದನ್ನೂ ಕಡಿಯಲಾಗದು. ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟು ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅನಕ್ರಮಣಪ್ರವೇಶ, ದನಕರವನ್ನು ಮೇಯಿಸುವದು, ದನಗಳನ್ನು ಸ್ಟೇಟು ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯುವದು ಅಥವಾ ಯಾವ ಪುರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದಾಲ್ಲಿ ಅನಿಷ್ಟಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾ ಪ್ರಕಾರವಾದರೂ ಹಕ್ಕು ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು ನೀರಿನಲ್ಲಿ ಡೈನಾಮೇಟು ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳಲ್ಲಿ ಜುರ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪುತಗಳಾಗಿವೆ. ಮತ್ತು ಸದರೀ ಸ್ಟೇಟು ಫಾರೆಸ್ಟಿನಲ್ಲಿ ಇದರಹೀ ಕಂಡ ಕೆಲಸಗಳನ್ನು ಮಾಡುವವರು ಅರು ತಿಂಗಳು ಸಜಾ, ಅಥವಾ 500 ರೂಪಾಯಿಗಳು ಜುರ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣಿ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟು ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫೀಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗೆದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ ಅಥವಾ ಇನ್ನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹದನ ಮಾಡುವದು ಅಥವಾ ಉತ್ತುವದು.

4. ಈ ಪ್ರಕಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರುತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇಧೆ ಅಥವಾ ಉಂಟು ಎಂತ ಹೇಳುವದು ಅಂಥಾ ಪ್ರತಿ ಬಂದು ಪಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ವರೆಗೆ ಯನ್ನು ತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹಮೂಲಕವಾಗಲೀ ಅಥವಾ ರೂಬರೂಬಾಗಲೀ ತಿಳಿಯಪಡಿಸಬೇಕಲ್ಲದೆ ಪಕ್ಕುದಾರೀಗೆ ಬರೆಯವಾದ ದಸ್ತಾವೇಜುಗಳನ್ನು ಯಾ ಇತರ ರುಜುವಾತನ್ನು ಹಾಜರ್ಮಾಡಬೇಕು

ಅ. ಆನಂದರಾವ್,
ಫಾರೆಸ್ಟು ಸೆಟಲ್‌ಮೆಂಟ್ ಆಫೀಸರು.